**CC No.1539/2022**
**DW-1**

# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.1539/2022

| | | | |
|---|---|---|---|
| | | ಡಿ.ಡಬ್ಲ್ಯೂ | **1** |
| ಹೆಸರು | | ಶಿವಕುಮಾರ್ ಎನ್ | |
| ತಂದೆಯ ಹೆಸರು / ಗಂಡನ ಹೆಸರು | | ನಾಗೇಂದ್ರಸ್ವಾಮಿ ಎಲ್ | |
| ವಯಸ್ಸು | | **37** | |
| ಉದ್ಯೋಗ | | ರಿಯಲ್ ಎಸ್ಟೇಟ್ | |
| ವಿಳಾಸ | | ಏಡುಮಡು ಗ್ರಾಮ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು. | |

ದಿನಾಂಕ.**17.07.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**ಮದ್ಯಂತರ ಅರ್ಜಿ ಆದೇಶ ದಿನಾಂಕ.17.07.2025ರ ಆಧಾರದ ಮೇಲೆ ಮುಖ್ಯ ವಿಚಾರಣೆ**

**ಃ - ಆರೋಪಿ ಪರ ವಕೀಲರಾದ ಶ್ರೀ. ಡಿ.ಎಲ್  ರವರಿಂದಃ-**

ಪಿರ್ಯಾದುದಾರರು ನನಗೆ **15-20**ವರ್ಷಗಳಿಂದ ಪರಿಚಯ. ಪಿರ್ಯಾದುದಾರರು ನನ್ನ ಸ್ನೇಹಿತರು. ನಾನು ಪಿರ್ಯಾದುದಾರರಿಂದ **2017**ನೇ ಇಸವಿಯಲ್ಲಿ ಐದು ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೆ, ಅದಕ್ಕೆ ಸಂಬಂಧಿಸಿದಂತೆ

ಅಗ್ರಿಮೆಂಟನ್ನು ಸಹ ನಾವು ಮಾಡಿಕೊಂಡಿರುತ್ತೇವೆ. ನಾನು ಜಮೀನು ಮಾರಾಟ ಮಾಡಿ ಪಿರ್ಯಾದುದಾರರಿಗೆ ಕೊಡಬೇಕಾಗಿದ್ದ ಸಂಪೂರ್ಣ ಹಣವನ್ನು **2018**ರಲ್ಲಿಯೇ ಈಗಾಗಲೇ ಪಾವತಿ ಮಾಡಿರುತ್ತೇನೆ. ಮೂರು ಲಕ್ಷ ರೂಪಾಯಿ ಹಣವನ್ನು ಪಿರ್ಯಾದುದಾರರಿಗೆ ನನ್ನ ತಂದೆಯ ಖಾತೆಯ ಮೂಲಕ ಪಾವತಿ ಮಾಡಿರುತ್ತೇನೆ. **50** ಸಾವಿರ ರೂಪಾಯಿ ಹಣವನ್ನು ಪಿರ್ಯಾದುದಾರರಿಗೆ ನನ್ನ ಖಾತೆಯ ಮೂಲಕ ಪಾವತಿ ಮಾಡಿರುತ್ತೇನೆ ಮತ್ತು ಎರಡು ಲಕ್ಷ ರೂಪಾಯಿ ಹಣವನ್ನು ನಗದು ರೂಪದಲ್ಲಿ ಪಿರ್ಯಾದುದಾರರ ಮನೆಗೆ ನಾನು, ನನ್ನ ಚಿಕ್ಕಪ್ಪನಾದ ಕೃಷ್ಣಮೂರ್ತಿ ಮತ್ತು ನನ್ನ ಸ್ನೇಹಿತನಾದ ಕರಿಯಪ್ಪ ರವರೊಂದಿಗೆ ಹೋಗಿ ಪಾವತಿ ಮಾಡಿರುತ್ತೇನೆ. ಈ ರೀತಿ ಹಣವನ್ನು ನಾನು ಮರುಪಾವತಿ ಮಾಡಿದ ನಂತರ ಪಿರ್ಯಾದುದಾರರು ನನಗೆ ಚೆಕ್ಕನ್ನು ವಾಪಸ್ಸು ಕೊಟ್ಟಿರುವುದಿಲ್ಲ. ನಾನು ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದರು ಅವರು ನನಗೆ ಚೆಕ್ಕನ್ನು ವಾಪಸ್ಸು ಕೊಟ್ಟಿರುವುದಿಲ್ಲ. ಪಿರ್ಯಾದುದಾರರು ಸಂಪೂರ್ಣ ಹಣವನ್ನು ತೆಗೆದುಕೊಂಡಿದ್ದರು ನನ್ನ ವಿರುದ್ದ ಈ ಸುಳ್ಳು ಕೇಸನ್ನು ಹೂಡಿರುತ್ತಾರೆ. ಪಿರ್ಯಾದುದಾರರು ಮತ್ತು ನನ್ನ ನಡುವೆ **2017**ನೇ ಸಾಲಿನಲ್ಲಿ ಮಾಡಿಕೊಂಡಂತಹ ಅಗ್ರಿಮೆಂಟಿನ ಪ್ರತಿಯು ಪಿರ್ಯಾದುದಾರರ ಬಳಿ ಇರುತ್ತದೆ, ನನಗೆ ಅದನ್ನು ಕೊಟ್ಟಿರುವುದಿಲ್ಲ. ಆದ್ದರಿಂದ ಈ ಕೇಸನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ತಂದೆಯ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಸ್ಟೇಟ್‌ಮೆಂಟನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**1** ಎಂದು ಗುರುತಿಸಲಾಯಿತು.

ನಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಸ್ಟೇಟ್‌ಮೆಂಟನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ-</u>

ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೇಳಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**